ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್

## ನಿರ್ಮಲ ಭಾರತ್ ಅಭಿಯಾನ

ಸಂಖ್ಯೆ :ಗ್ರಾಅಪ/ರಾನೀನೈಮಿ/ನಿಭಾಅ/82/ 2012-13 ದಿನಾಂಕ :25-09-2013

**ರವರಿಗೆ,**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
ಜಿಲ್ಲಾ ಪಂಚಾಯತ್,
ಕೊಪ್ಪಳ/ಯಾದಗಿರಿ/ಗುಲಬರ್ಗಾ/ಚಿತ್ರದುರ್ಗಾ/ಚಿಕ್ಕಮಗಳೂರು/ತುಮಕೂರು

**ಮಾನ್ಯರೆ,**

**ವಿಷಯ:** 2013ನೇ ಸಾಲಿನಲ್ಲಿ ನಿರ್ಮಲ ಗ್ರಾಮ ಪುರಸ್ಕಾರಕ್ಕಾಗಿ ಅರ್ಜಿಸಲ್ಲಿಸಿರುವ ಗ್ರಾಮ ಪಂಚಾಯಿತಿಗಳ ಅರ್ಜಿಗಳ ಹಾರ್ಡ್ ಪ್ರತಿಗಳನ್ನು ಸಲ್ಲಿಸದಿರುವ ಕುರಿತು.

**ಉಲ್ಲೇಖ:** 1)ಈ ಕಚೇರಿಯ ಪತ್ರ ಸಂಖ್ಯೆ:ಗ್ರಾಅಪ/ರಾನೀನೈಮಿ/ನಿಭಾಅ/ಎನ್.ಜಿ.ಪಿ-82/2012-13/104,ದಿ:25.05.2013
2) ಈ ಕಚೇರಿಯ ಪತ್ರ ಸಂಖ್ಯೆ:ಗ್ರಾಅಪ/ರಾನೀನೈಮಿ/ನಿಭಾಅ/ಎನ್.ಜಿ.ಪಿ-82/2012-13 /132, ದಿ:12.06.2013ಮತ್ತು ನೆನಪೋಲೆ ದಿನಾಂಕ 06.07.2013
3) ಈ ಕಚೇರಿ ಪತ್ರ ಸಂಖ್ಯೆ : ಗ್ರಾಅಪ/ರಾನೀನೈಮಿ/ನಿಭಾಅ/ಎನ್.ಜಿ.ಪಿ-82/2012-13/226,ದಿ:25.08.2013

-------

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ನೈರ್ಮಲ್ಯದಲ್ಲಿ ಸಂಪೂರ್ಣ ಸಾಧನೆ ಮಾಡಿರುವ ಗ್ರಾಮ ಪಂಚಾಯಿತಿಗಳನ್ನು 2013ನೇ ಸಾಲಿನಲ್ಲಿ ನಿರ್ಮಲ ಗ್ರಾಮ ಪುರಸ್ಕಾರಕ್ಕಾಗಿ ಅರ್ಜಿ ಸಲ್ಲಿಸಿ, ಅವುಗಳ ಹಾರ್ಡ್ ಪ್ರತಿಗಳನ್ನು ರಾಜ್ಯ ಕಚೇರಿಗೆ ಕಳುಹಿಸಿಕೊಡಲು ತಿಳಿಸಲಾಗಿತ್ತು. ಆದರೆ ನಿಮ್ಮ ಜಿಲ್ಲೆಯವತಿಯಿಂದ ಪುರಸ್ಕಾರಕ್ಕಾಗಿ ಅರ್ಜಿಗಳನ್ನು ಕೇಂದ್ರ ಸರ್ಕಾರದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದಿಯೇ ಹೊರತು ಸದರಿ ಅರ್ಜಿಗಳ ಹಾರ್ಡ್ ಪ್ರತಿಗಳನ್ನು ರಾಜ್ಯ ಕಚೇರಿಗೆ ಸಲ್ಲಿಸಿರುವುದಿಲ್ಲ. ಈ ಸಂಬಂಧ ರಾಜ್ಯ ಕಚೇರಿಯಿಂದ ಹಲವಾರು ಭಾರಿ ನಿಮ್ಮ ಜಿಲ್ಲೆಯ ಸಮಾಲೋಚಕರಿಗೆ ತಿಳಿಸಿದ್ದರೂ ಸಹ ಈ ಬಗ್ಗೆ ಯಾವುದೇ ರೀತಿಯ ಕ್ರಮವಹಿಸಿರುವುದಿಲ್ಲ.

ಕೇಂದ್ರ ಸರ್ಕಾರಕ್ಕೆ ದಿನಾಂಕ 30.09.2013ರ ಒಳಗಾಗಿ ಎಲ್ಲಾ ಕ್ರೂಢಿಕೃತ ಮಾಹಿತಿಯನ್ನು ಸಲ್ಲಿಸಬೇಕಾಗಿರುವುದರಿಂದ ಹಾಗೂ ನಿಮ್ಮ ಜಿಲ್ಲೆಗೆ ಸಂಬಂಧಿಸಿಂತೆ ಮೌಲ್ಯಮಾಪನದ ವರದಿಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸಬೇಕಾಗಿರುವುದರಿಂದ ದಿನಾಂಕ 26.09.2013ರ ಒಳಗಾಗಿ ಎನ್‌ಜಿಪಿ ಅರ್ಜಿಗಳ ಹಾರ್ಡ್ ಪ್ರತಿಗಳನ್ನು ಮುದ್ದಾಂ ಬಂದು ರಾಜ್ಯ ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ.

ನಿರ್ಮಲ ಗ್ರಾಮ ಪುರಸ್ಕಾರದ ಅರ್ಜಿಗಳ ಹಾರ್ಡ್ ಪ್ರತಿಗಳನ್ನು ಸಲ್ಲಿಸದಿದ್ದಲ್ಲಿ ನಿಮ್ಮ ಜಿಲ್ಲೆಯನ್ನು ಮೌಲ್ಯ ಮಾಪನದ ಪ್ರಕ್ರಿಯೆಯಿಂದ ಕೈಬಿಡಲಾಗುವುದು.

ತಮ್ಮ ವಿಶ್ವಾಸಿ

ಮಿಷನ್ ನಿರ್ದೇಶಕರ ಪರವಾಗಿ
ರಾ.ನೀ.ನೈ.ಮಿಷನ್ ಹಾಗೂ ಸರ್ಕಾರದ ಪದನಿಮಿತ್ತ
ಅಪರ ಕಾರ್ಯದರ್ಶಿಗಳು,
ಗ್ರಾ. ಅ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು:**

1. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಯವರ ಮಾಹಿತಿಗಾಗಿ.
2. ಕಾರ್ಯದರ್ಶಿಗಳು (ಪಂ.ರಾ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಯವರ ಮಾಹಿತಿಗಾಗಿ.

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು – 560 009.
ದೂರವಾಣಿ ಸಂ.22221861-62 : – ದೂರವಾಣಿ & ಫ್ಯಾಕ್ಸ್ :-22221862 E-mail : wsrdpr@gmail.com